ಮಂತ್ರಿಗಳ ಕಛೇರಿಯೊಳಗೆ ಚೀಫ್ ಇಂಜಿನಿಯರ್‌ರವರು ಪ್ಲಾನ್ ಎಸ್ಟಿಮೇಟ್ ಕೊಟ್ಟಿರುವುದನ್ನು ನೋಡಿದ್ದೇನೆ. ಎರಡನೆಯದಾಗಿ ಚೀಫ್ ಇಂಜಿನಿಯರ್ ಆಫೀಸಿನಲ್ಲಿ ಈ ಒಂದು ಯೋಜನೆ ವಿಷಯ ಪ್ರಿಂಟೆಡ್ ಪುಸ್ತಕದಲ್ಲಿ ಇದ್ದುದನ್ನು ನೋಡಿದ್ದೇನೆ. ಆದರೂ ಇಲ್ಲಿ ಇಲ್ಲ ಎಂದು ಉತ್ತರ ಕೊಡುವುದಕ್ಕೆ ಕಾರಣ ಏನು ?

† ಶ್ರೀ ಡಿ. ದೇವರಾಜ ಅರಸ್.—ಕಾರಣ ನಮ್ಮ ಹತ್ತಿರ ಬಂದಿಲ್ಲ.

ಶ್ರೀ ಎಸ್. ಎಂ. ಶಿರ್ನಾಳಿ ಚಂದ್ರಶೇಖರ್.—ಹಾಗಾದರೆ, ಸಂಬಂಧಪಟ್ಟ ಮಂತ್ರಿಗಳು ಕೊಟ್ಟಿರುವುದನ್ನು ಎಲ್ಲಿಗೆ ಹಾಕಿದರು?

ಶ್ರೀ ಡಿ. ದೇವರಾಜ ಅರಸ್.—ಮಂತ್ರಿಗಳು ಕೊಟ್ಟಿದ್ದರು ಎಂದು ತಾವು ಹೇಳುತ್ತಿದ್ದೀರಿ ; ಆದರೆ ಇದು ಸರ್ಕಾರಕ್ಕೆ ಬಂದಿಲ್ಲ ; ಸಂಬಂಧಪಟ್ಟ ಇಂಜಿನಿಯರ್‌ರವರು ಎಸ್ಟಿಮೇಟ್ ಸ್ಕೂಟಿನಿ ಮಾಡಿ ಈ ಪ್ರಾಜೆಕ್ಟ್ ಕಟ್ಟುವುದಕ್ಕೆ ಫೀಸಿಬಿಲಿಟಿ ಇದೆಯೇ ಎಂದು ನೋಡುತ್ತಿದ್ದಾರೆ. ಭದ್ರಾ ಮತ್ತು ತುಂಗಾ ಎರಡು ನದಿಗಳ ನೀರನ್ನು ಉಪಯೋಗ ಮಾಡುವುದರಲ್ಲಿ ಕೆಲವು ಕಂಡೀಷನ್ಸ್ ಇವೆ. ಇದು ಕೃಷ್ಣಾ ವ್ಯಾಲಿಗೆ ಸೇರಿರುವುದರಿಂದ ; ಕಂಡೀಷನ್ಸ್ ಯಾವ ರೀತಿ ಟ್ಯಾಲಿಆಗುತ್ತದೆ ಎಂಬುದನ್ನು ನೋಡಿ, ನಮ್ಮಲ್ಲಿರತಕ್ಕ ನೀರಿನ ಮೊತ್ತದಲ್ಲಿ ಈ ಪ್ರಾಜೆಕ್ಟ್ ಮಾಡುವುದಕ್ಕೆ ಸಾಧ್ಯವೇ ಎಂಬುದನ್ನೆಲ್ಲಾ ನೋಡಿ ಮಾಡಬೇಕಾಗುತ್ತದೆ; ಇದು ಅಷ್ಟು ಸುಲಭವಾದ ವಿಚಾರವಲ್ಲ,

ಶ್ರೀ ಎಸ್. ಎಂ. ಶಿರ್ನಾಳಿ ಚಂದ್ರಶೇಖರ್. —ಸ್ವಾಮಿ ೧.೨೪ ಕೋಟಿ ರೂಪಾಯಿಗಳವರೆಗೆ ಈ ಯೋಜನೆಯನ್ನು ತೆಗೆದುಕೊಳ್ಳಬೇಕೆಂದು ಹೇಳಿ ಪುಸ್ತಕದಲ್ಲಿ ಪ್ರಿಂಟ್ ಆಗಿರುವುದನ್ನು ನೋಡಿದ್ದೇನೆ. ಬರುವ ವರ್ಷದಲ್ಲಿ ಈ ಕೆಲಸ ಪ್ರಾರಂಭವಾಗುತ್ತದೆ ಎನ್ನುವ ವಿಚಾರ ಕೂಡ ಕಛೇರಿಯಲ್ಲಿ ತಿಳಿದು ಬಂದಿರುತ್ತದೆ. ಆದ್ದರಿಂದ ಇದರಲ್ಲಿ ಯಾವ ಸಮಸ್ಯೆಯೂ ಇಲ್ಲದಿರುವುದರಿಂದ ಜಾಗ್ರತೆಯಾಗಿ ಈ ಕೆಲಸವನ್ನು ಮುಗಿಸುತ್ತೀರಾ ಎಂದು ಕೇಳುತ್ತೇನೆ?

SRI D. DEVARAJ URS.—We expect a detailed Project report by the end of this year and we will take up this issue.

Agricultural Collective Farming Co-operative Societies and Joint Farming Co-operative Societies in Tumkur District.

639. SRI V. L. SHIVAPPA (Tiptur).—Will the Minister of State for Co-operation be pleased to state.—

(a) The number of Agricultural Collective Farming Co-operative Societies and Joint Farming Co-operative Societies existed in Tumkur District on 1-7-1976;

(b) what are the details of funds provided ;

(c) how many of them are functioning;

(d) how many of them are liquidated;

(e) what action Government would take in respect of those Societies which are not functioning properly and which have not been liquidated?

SRI V. M. KUSHNOOR (Minister of State for Co-operation).—

(a) Five Agricultural Collective Farming Societies. 49 Joint Farming Co-operative Societies.

(b).—

1.	Government share capital sanctioned	Rs.	86,400
2.	M.T. Loan sanctioned ...	Rs.	2,28,700
3.	Godown-cum-Cattle shed loan sanc-... tioned	Rs.	1,35,000
4.	Subsidy ...	Rs.	45,000

From Social Welfare Department

1.	Loan ...	Rs.	1,64,827
2.	Subsidy ...	Rs.	46,668

From Animal Husbandry and Veterinary Department

1.	Loan sanctioned ...	Rs.	43,000

N.E.S. Department

1.	Loan ...	Rs.	5,730

P.L.D. Banks

1.	Loan ...	Rs.	5,000

(c) 10 Societies

(d) 12 Societies

(e) Assistant Registrars of Co-operative Societies have been directed to submit proposals for supersession and liquidation.

ಶ್ರೀ ವಿ. ಎಲ್. ಶಿವಪ್ಪ.—ಕೃಷಿ ಸಂಯುಕ್ತ ಬೇಸಾಯ ಸಹಕಾರಿ ಸಂಘಗಳು ೫, ಸಂಯುಕ್ತ ಬೇಸಾಯ ಸಹಕಾರಿ ಸಂಘಗಳು ೪೯ ಎಂದು ತಾವು ಉತ್ತರದಲ್ಲಿ ಕೊಟ್ಟಿರುತ್ತೀರಿ. ಈ ಸಂಯುಕ್ತ ಬೇಸಾಯ ಸಂಘಗಳಲ್ಲಿ ೧೦-೧೨ ಮಾತ್ರ ಕೆಲಸ ಮಾಡುತ್ತಿವೆಯೆಂದು ಹೇಳಿದ ಮೇಲೆ ಉಳಿದ ೩೭ ಸಂಘಗಳು ಏನಾದವು ಎಂದು ನಾನು ತಮ್ಮನ್ನು ಕೇಳುತ್ತೇನೆ.

† ಶ್ರೀ ವಿ. ಎಂ. ಕುಸನೂರ್.—ಉಳಿದ ಸೊಸೈಟಿಗಳು ಕೆಲಸ ಮಾಡುತ್ತಿಲ್ಲ.

ಶ್ರೀ ವಿ. ಎಲ್. ಶಿವಪ್ಪ.—ಸ್ವಾಮಿ, ೬ ಲಕ್ಷ ರೂಪಾಯಿಗಳಷ್ಟು ಸಾಲವನ್ನು ಜನರಿಗೆ ಕೊಟ್ಟಿರುತ್ತೇವೆಂದು ಇದರಲ್ಲಿ ಹೇಳುತ್ತೀರಿ, ಈ ಪೈಕಿ ವಸೂಲಾತಿ ಏನಾದರೂ ಆಗಿರುತ್ತದೆಯೇ?

ಶ್ರೀ ವಿ. ಎಂ. ಕೂಸನೂರ್.—ಹೆಚ್ಚಿನ ಭಾಗ ವಸೂಲಾಗಿಲ್ಲ.

ಶ್ರೀ ವಿ. ಎಲ್. ಶಿವಪ್ಪ.—ಹಾಗಾದರೆ ಶೇರ್ ಕ್ಯಾಪಿಟಲ್ ಏನಾಯಿತು ಸ್ವಾಮಿ?

ಶ್ರೀ ವಿ. ಎಂ. ಕೂಸನೂರ್.—ನಾವು ಕೊಟ್ಟಿರತಕ್ಕಂಥ ಷೇರ್ ಕ್ಯಾಪಿಟಲ್ ೮೬ ಸಾವಿರ ರೂಪಾಯಿಗಳು. ಪ್ರತಿಯೊಂದು ಸೊಸೈಟಿಗೂ ೨ ಸಾವಿರ ರೂಪಾಯಿಗಳಂತೆ ಕೊಟ್ಟಿರುತ್ತೇವೆ. ಷೇರ್ ಕ್ಯಾಪಿಟಲ್ ಏನಾಗಿದೆಯೋ ಗೊತ್ತಿಲ್ಲ

ಶ್ರೀ ವಿ. ಎಲ್. ಶಿವಪ್ಪ.—೯೧ ಸಾವಿರದ ೬೬೮ ರೂಪಾಯಿಗಳಷ್ಟು ಸಹಾಯಧನವಾಗಿ ಕೊಟ್ಟಿರತಕ್ಕಂಥಾದ್ದು ಏನಾಗಿದೆ ಎಂಬುದನ್ನು ತಿಳಿಸುತ್ತೀರಾ?

ಶ್ರೀ ವಿ. ಎಂ. ಕುಸನೂರು.—ಅದು ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ವಿ. ಎಲ್. ಶಿವಪ್ಪ.—ರದ್ದುಗೊಳಿಸಲು ಹಾಗೂ ಮುಚ್ಚಲು ಸಲಹೆಗಳನ್ನು ಸಲ್ಲಿಸುವಂತೆ ಸಹಕಾರ ಸಂಘಗಳ ಸಹಾಯಕ ರಿಜಿಸ್ಟ್ರಾರ್‌ರವರಿಗೆ ಆದೇಶವನ್ನು ನೀಡಲಾಗಿದೆಯೆಂದು ತಿಳಿಸಿರುತ್ತೀರಿ, ಆಂದರೆ ಮುಚ್ಚಿಬಿಡಬೇಕೆಂದಲೋ ಅಥವಾ ಅವುಗಳಿಗೆ ಜೀವನ ಕೊಡಬೇಕೆಂತಲೋ? ಇದರ ಬಗ್ಗೆ ಸರ್ಕಾರದ ಉದ್ದೇಶವೇನು ಇರುತ್ತದೆಂಬುದನ್ನು ತಿಳಿಸುತ್ತೀರಾ?

ಶ್ರೀ ವಿ. ಎಂ. ಕೂಸನೂರು.—ನೋಟೀಸ್ ಕೊಟ್ಟಿರುತ್ತೇವೆ. ರಿಪೋರ್ಟ್ ಬಂದಮೇಲೆ ಹೇಳುತ್ತೇನೆ. ನಮ್ಮ ಉದ್ದೇಶ ಮುಂಚ್ಚಬೇಕೆಂದಿಲ್ಲ.

Inconvenience Caused to Public by Amalgamations of Societies.

641. SRI K. L. MUNISWAMY (Malavalli).—Will the Minister of State for Co-operation be pleased to state.—

Whether Government are aware of the inconvenience caused to to the Public after amalgamation of 2 or 3 Societies.

SRI V. M. KUSHNOOR (Minister of State for Co-operation).—Inconvenience caused to the public after amalgamation has not come to the notice of Government excepting in few Societies which were involved in Writ Petitions.

ಶ್ರೀ ಕೆ. ಎಲ್. ಮುನಿಸ್ವಾಮಿ.—ತಾವು ಉತ್ತರದಲ್ಲಿ ಎರಡು, ಮೂರು ಸಂಘಗಳನ್ನು ಒಟ್ಟು ಗೂಡಿಸಿದ ನಂತರ ನಾರ್ವಜನಿಕರಿಗೆ ಅನಾನುಕೂಲತೆಗಳಾಗಿಲ್ಲವೆಂದು ಹೇಳಿದ್ದೀರಿ. ಆದರೆ ಮಳವಳ್ಳಿಯಿಂದ ೧೮ ಕಿಲೋಮೀಟರ್ ದೂರದಲ್ಲಿರತಕ್ಕಂಥ ಮಲಗಳ್ಳಿ ಮತ್ತು ಹಲಗೂರು ಮತ್ತು ಇನ್ನಿತರ ಕಡೆಗಳಲ್ಲಿರತಕ್ಕಂಥ ಜನರಿಗೆ ತೊಂದರೆಯುಂಟಾಗಿರುತ್ತದೆ. ಇದನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ಎಂದು ಕೇಳುತ್ತೇನೆ.

† ಶ್ರೀ ವಿ. ಎಂ. ಕೂಸನೂರು.—ಇದುವರೆಗೂ ಅದರ ಬಗ್ಗೆ ಯಾವ ವಿಧವಾದ ರೆಪ್ರೆಸೆಂಟೇಷನ್ ಬಂದಿಲ್ಲ. ತಾವು ಈವಾಗ ಹೇಳುತ್ತಿದ್ದೀರಿ. ಅದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಕೆ. ಎಲ್. ಮುನಿಸ್ವಾಮಿ.—ಕೋರ್ಟಿಗೆ ರಿಟ್ ಹೋಗಿರತಕ್ಕಂಥ ಸೊಸೈಟಿಗಳಿಗೆ ಧನ ಸಹಾಯ ಕೊಡಬಾರದೆಂದು ಹೇಳಿರುತ್ತೀರಿ, ಅದು ಸರಿಯಲ್ಲ, ಇವುಗಳಿಗೂ ಕೂಡ ಧನಸಹಾಯ ಕೊಡಲು ಅವಕಾಶ ಮಾಡಿಕೊಡಬೇಕೆಂದು ಹೇಳುತ್ತೇನೆ?

ಶ್ರೀ ವಿ. ಎಂ. ಕುಸನೂರು.—ಅದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಜಿ. ಬಿ. ಶಂಕರರಾವ್.—ಹಿಂದೆ ಅಮಾಲ್ಗಮೇಟ್ ಮಾಡುವ ಸಂದರ್ಭದಲ್ಲಿ ಸಹಕಾರಿ ಸಂಘಗಳಿಗೆ ನೋಟೀಸ್ ಕೊಡದೆ ಅಮಾಲ್ಗಮೇಟ್ ಮಾಡಿದ್ದೇವೆಂದು ಹೇಳಿದ್ದಿರಿ, ಈಗ ಪುನಃ ಅಮಾಲ್ಗಮೇಟ್ ಮಾಡಲಿಕ್ಕೆ ಸಾಧ್ಯವಿದ್ದರೆ ಅಮಾಲ್ಗಮೇಟ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

SRI V. M. KUSHNOOR.—I am not going to reopen the whole issue. We have brought a validating Act. Whatever we have done earlier stands. I have stated this earlier also and now also I say the same thing.